**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ08-07-2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಹೆಚ್.ಎಲ್.ಡಿ.ವಕೀಲರಿಂದಃ**

ನಾನು ದೇವಸ್ಥಾನದಲ್ಲಿ ಪುರೋಹಿತನಾಗಿರುತ್ತೇನೆ. ನಾನು ಆನ್ ಲೈನ್ ಶಾಸ್ತ್ರ ಮತ್ತು ನೇರ ಶಾಸ್ತ್ರ ಹೇಳುತ್ತೇನೆ. ನನಗೆ ಕಛೇರಿ ಇರುವುದಿಲ್ಲ. ಆದರೆ ಮನೆಯಲ್ಲೇ ಶಾಸ್ತ್ರ ಹೇಳುತ್ತೇನೆ. ನನಗೆ ವಾರ್ಷಿಕ 6 ರಿಂದ 8 ಲಕ್ಷ ಆದಾಯ ಇರುತ್ತದೆ. ಈಗ ಅದನ್ನು ಹೊರತುಪಡಿಸಿ ಬೇರೆ ಆದಾಯ ಇರುವುದಿಲ್ಲ. ನನ್ನ ಆದಾಯ ಮೂಲ ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಪಡಿಸಿರುತ್ತೇನೆ. 2023-24 ಮತ್ತು 2024-25ರಲ್ಲಿ ಕನಿಷ್ಠ ರೂ.6ಲಕ್ಷ ಆದಾಯ ಇತ್ತು. ನಾನು ಆದಾಯ ತೆರಿಗೆ ಪಾವತಿಯನ್ನು 3 ವರ್ಷಗಳಿಂದ ಮಾಡುತ್ತಿದ್ದೇನೆ. ಆರೋಪಿಗೆ ಹಣ ನೀಡಿರುವ ಬಗ್ಗೆ ಆದಾಯ ತೆರಿಗೆಯಲ್ಲಿ ನಮೂದು ಮಾಡಿರುತ್ತೇನೆ. ಆರೋಪಿಯನ್ನು ಹೊರತುಪಡಿಸಿ ನಾನು ಅಶೋಕ ಎಂಬುವವರಿಗೂ ಸಹ ರೂ.3ಲಕ್ಷ ಸಾಲವನ್ನು 2024ರಲ್ಲಿ ನೀಡಿರುತ್ತೇನೆ.

ಈ ಪ್ರಕರಣದ ಪೂರ್ವದಲ್ಲಿ 2021ರಲ್ಲಿ ಆರೋಪಿ 2 ಬಾರಿ ಸಣ್ಣ ಮೊತ್ತದ ಕೈಗಡ ಸಾಲ ಪಡೆದಿರುತ್ತಾರೆ ಮತ್ತು ವಾಪಸ್ಸು ನೀಡಿರುತ್ತಾರೆ. ನಾನು ಸದರಿ ಸಾಲವನ್ನು ನಗದು ಮೂಲಕ ನೀಡಿರುತ್ತೇನೆ. ಈ ಬಗ್ಗೆ ನನ್ನ ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿಲ್ಲ. ಈ ಪ್ರಕರಣದಲ್ಲಿ ನಾನು ಆರೋಪಿಗೆ ಒಟ್ಟು ರೂ.34ಲಕ್ಷ ಹಣವನ್ನು ಅಕೌಂಟ್ ಮತ್ತು ನಗದು ಮೂಲಕ ನೀಡಿರುತ್ತೇನೆ. ದಿಃ06/09/2022ರಂದು ವಾಸವಾಂಭ ಕೋ-ಆಪರೇಟಿವ್ ಸೊಸೈಟಿ, ಹೊಳೆನರಸೀಪುರ ಶಾಖೆಯಿಂದ ರೂ.8ಲಕ್ಷ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಉಳಿದ ಮೊತ್ತವನ್ನು ನಗದು ರೂಪದಲ್ಲಿ ಸೆಪ್ಟೆಂಬರ್ ತಿಂಗಳಲ್ಲೇ ನೀಡಿರುತ್ತೇನೆ. 20,000/- ಮೇಲ್ಪಟ್ಟು ಹಣವನ್ನು ಚೆಕ್ ಮೂಲಕ ನೀಡಬೇಕು ಎಂದರೆ ಸರಿ. ಆರೋಪಿ ಮತ್ತು ನನ್ನ ನಡುವೆ ವಿಶ್ವಾಸ ಇದ್ದುದರಿಂದ ನಗದು ಮೂಲಕ ಹಣ ನೀಡಿರುತ್ತೇನೆ.

ಚೆಕ್ಕನ್ನು ನಗದೀಕರಣಕ್ಕಾಗಿ ಹಾಕುವ ಮೊದಲು ಅಂದಾಜು ಡಿಸೆಂಬರ್-2024ರಲ್ಲಿ ಆರೋಪಿಯನ್ನು ಕೇಳಿರುತ್ತೇನೆ. ನಿಖರವಾದ ದಿನಾಂಕ ನೆನಪಿಲ್ಲ. ಆದರೆ ಬೆಳಿಗ್ಗೆ 11-00 ಗಂಟೆಗೆ ಕರೆ ಮಾಡಿ ಕೇಳಿರುತ್ತೇನೆ. ನನ್ನ ನೋಟೀಸಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ನೋಟೀಸು ಆರೋಪಿಗೆ ತಲುಪಿರುವ ಬಗ್ಗೆ ನಮ್ಮ ವಕೀಲರನ್ನು ವಿಚಾರಿಸಿರುತ್ತೇನೆ. ನಾನು ಕಳುಹಿಸಿದ ನೋಟೀಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ನೋಟೀಸು

ಆರೋಪಿಯ ಗಮನಕ್ಕೆ ಇರುವುದಿಲ್ಲ ಎಂದರೆ ಸರಿಯಲ್ಲ. ಜನವರಿ-2025ರಲ್ಲಿ ನಾನು ಆರೋಪಿಗೆ ನೋಟೀಸು ಕಳುಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ಆರೋಪಿಗೆ 2 ನೋಟೀಸುಗಳನ್ನು ಕಳುಹಿಸಿರುತ್ತೇನೆ. ಅದರಲ್ಲಿರುವ ಮಾಹಿತಿಗಳು ನನಗೆ ಗೊತ್ತಿರುತ್ತವೆ. ಆರೋಪಿಗೆ ನೋಟೀಸು ಜಾರಿಯಾದ ಬಗ್ಗೆ ಅಂಚೆ ಇಲಾಖೆಯಿಂದ ವಿಚಾರಿಸಿರುತ್ತೇವೆ. ಅಂಚೆ ಇಲಾಖೆಯವರೊಂದಿಗೆ ಷಮೀಲಾಗಿ ಸುಳ್ಳು ಷರಾ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ನಿಪಿ-12ನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ06/09/2022ರ 2-3 ದಿನಗಳ ಹಿಂದೆ ಆರೋಪಿ ಸಾಲ ಕೇಳಿರುತ್ತಾರೆ. ನಾನು ದಿಃ06/09/2022ರಂದು ಸಾಲ ನೀಡಿರುತ್ತೇನೆ. ಅದೇ ದಿನ ಹಣ ನೀಡಲು ತೊಂದರೆ ಇರಲಿಲ್ಲ ಆದರೆ 6 ನೇ ತಾರೀಖು ಹಣ ನೀಡುವುದಾಗಿ ಹೇಳಿರುತ್ತೇನೆ. 3 ತಿಂಗಳ ಹಿಂದೆ ನನ್ನ ಪಿತ್ರಾರ್ಜಿತ ಅಡಿಕೆ ತೋಟವನ್ನು ಮಾರಾಟ ಮಾಡಿದ ಹಣವನ್ನು ನಾನು ಇಟ್ಟುಕೊಂಡಿದ್ದೆ. ಸದರಿ ಕ್ರಯ ಪತ್ರ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಆರೋಪಿಯನ್ನು ಹಣ ಮರುಪಾವತಿ ಮಾಡುವಂತೆ ಭೇಟಿ ಯಾದಾಗ ಹಣ ಮರುಪಾವತಿ ಮಾಡಿಲ್ಲ ಎಂದು ದೂರಿನಲ್ಲಿ ಬರೆಸಿರುತ್ತೇನೆ . ಆರೋಪಿಗೆ 500 ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಆರೋಪಿಗೆ ಹಣವನ್ನು ಲಕ್ಷ್ಮಿಪುರದ ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ಹೆಂಡತಿ ಇದ್ದೇವು. ಆರೋಪಿಗೆ ಹಣ ನೀಡುವಾಗ ನೋಟರಿ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಕರಾರು ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಸದರಿ ಕರಾರು ಪತ್ರದಲ್ಲಿ ಈ ಪ್ರಕರಣದ ಚೆಕ್ ಗಳನ್ನು ನಮೂದಿಸಿರುತ್ತಾರೆ. ಕರಾರು ಪತ್ರದ ಬಗ್ಗೆ ನನ್ನ ನೋಟೀಸ ನಲ್ಲಿ ಮತ್ತು ದೂರಿನಲ್ಲಿ ತಿಳಿಸಿರುತ್ತೇನೆ.

ಆರೋಪಿ ಮಂಗಳೂರಿನಲ್ಲಿ ವಾಸವಿರುತ್ತಾರೆ. ಆರೋಪಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ. ಆರೋಪಿ ಹಾಸನದಲ್ಲಿ ದ್ರಾಕ್ಷಯಣಿ ಎಂಬುವವರ ಮೂಲಕ ಪರಿಚಯವಾಗಿರುತ್ತಾರೆ. ಅವರ ಮನೆಯಲ್ಲಿ ನಾನು ಪೂಜೆ ಮಾಡಿಕೊಟ್ಟಿದ್ದು, ಆಗ ಪರಿಚಯವಾಗಿರುತ್ತಾರೆ. ಅವರು ಗೃಹಿಣಿಯಾಗಿರುತ್ತಾರೆ. ಆರೋಪಿ ಮತ್ತು ದ್ರಾಕ್ಷಯಣಿಯವರು ಕನ್ನಡಕ ಹೋಲ್ ಸೇಲ್ ವ್ಯಾಪಾರ ಮಾಡುತ್ತಾರೆಂದರೆ ಗೊತ್ತಿಲ್ಲ. ದ್ರಾಕ್ಷಯಣಿಯವರಿಗೆ ಹಾಸನದಲ್ಲಿ ಅಂಗಡಿ ಇದೆ ಎಂದರೆ ಗೊತ್ತಿಲ್ಲ. ದ್ರಾಕ್ಷಯಣಿ ಮತ್ತು ಆರೋಪಿ ನಡುವೆ ಹಣಕಾಸಿನ ವ್ಯವಹಾರ ಇದೆ ಎಂದರೆ ಗೊತ್ತಿಲ್ಲ. ಆರೋಪಿ ವಿರುದ್ದ ನಾನು ಮತ್ತೊಂದು ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ನನ್ನ ವಿರುದ್ದ ಒಂದು ಪ್ರಕರಣ ಇದೇ

ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ. ಆರೋಪಿ 2022 ರಲ್ಲಿ ಚೆಕ್ ಗಳನ್ನು ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ಮತ್ತೊಂದು ಕರಾರು ಪತ್ರ ಮಾಡಿ ಚೆಕ್ ಗಳನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ದಿನಾಂಕ ಮತ್ತು ಸಮಯ ನೆನಪಿಲ್ಲ. ಆರೋಪಿ ಚೆಕ್ ಗಳನ್ನು ನೀಡುವ ಕಾಲಕ್ಕೆ ಹಾಸನದಲ್ಲಿ ಒಬ್ಬ ನೋಟರಿ ವಕೀಲರು ಇದ್ದರು. ದ್ರಾಕ್ಷಯಣಿಯವರು ಇದ್ದರು. ಬೇರೆ ಯಾರು ಇರಲಿಲ್ಲ.

ಆರೋಪಿ 6 ತಿಂಗಳ ನಂತರ ಚೆಕ್ ಗಳನ್ನು ಹಾಜರುಪಡಿಸುವಂತೆ ತಿಳಿಸಿರುತ್ತಾರೆ. ನಾನು 10 ನೇ ತರಗತಿಯವರೆಗೆ ಮತ್ತು ವೇದ ವಿದ್ಯಾಭ್ಯಾಸ ಮಾಡಿರುತ್ತೇನೆ. ಚೆಕ್ ನಲ್ಲಿರುವ ಸಹಿಗೂ ಮತ್ತು ನಿ ಪಿ 9 ರಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಆರೋಪಿಯೇ ಚೆಕ್ ನ್ನು ಬರೆದು ಸಹಿ ಮಾಡಿ ಕೊಟ್ಟಿರುವುದಾಗಿ ನುಡಿಯುತ್ತಾರೆ. ನಿ ಪಿ 12 ನ್ನು ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ನಿ ಪಿ 10 ನೋಟೀಸನ್ನು ಆರೋಪಿಗೆ ಮೊದಲು ನೀಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**